ವೀಣಾ ರವಿ ಪೈ, ಕಾಸರಕೋಡ
ಜೀವನದಲ್ಲಿ ಸಹನೆ, ಸಮಾಧಾನ ಇಲ್ಲದಿದ್ದರೆ ಏನಾಗಬಹುದು?




ಪ್ಯಾನಲ್ ಡಿಸ್ಕಷನ್ ನಡೆಸುವ ಆ್ಯಂಕರ್ ಆಗಬಹುದು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ನಮ್ಮ ಬದುಕಿಗೊಂದು ಅರ್ಥ ಸಿಗುವುದು ಯಾವಾಗ?
ಅದು ವ್ಯರ್ಥವಾಗಕೂಡದೆಂದು ನಾವು ನಿರ್ಧರಿಸಿದಾಗ.

ರತ್ನಾ ಅಶೋಕ ಗೊರವರ, ಧಾರವಾಡ
ಮೂರೂ ಬಿಟ್ಟವರು ಲೋಕಕ್ಕೆ ದೊಡ್ಡವರು; ಮೂರೂ ಇರುವವರು?
ಶ್ಲೋಕಕ್ಕೂ ದೊಡ್ಡವರು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಬೆಂಕಿಗಿಂತ ಶಕ್ತಿಯುತವಾದದ್ದು ಯಾವುದು?



ಕ್ಷಮಿಸಿ. ಬೆಂಕಿ ನಿರ್ಬಲ; ಗಾಳಿಯ ಪ್ರಭಾವ, ನೀರಿನ ಅಭಾವ ಇದ್ದಾಗ ಮಾತ್ರ ಅದರ ಅಟಾಟೋಪ.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಮೇಲೆ ಬಹಳಷ್ಟು ಜನ ಸೌಜನ್ಯ, ಶಿಷ್ಟಾಚಾರಗಳನ್ನು ಮರೆಯುವುದೇಕೆ?
ಮಳೆಯಲ್ಲಿ ನಡೆದು ಮನೆ ಸೇರಿದ ಮೇಲೆ ಛತ್ರಿ, ಚಪ್ಪಲಿಗಳನ್ನು ಹೊರಗಿಡುವುದು ವಾಡಿಕೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಕನ್ನಡ ಶಾಲೆಗಳು ಕಲ್ಪವೃಕ್ಷದಂತೆ ಅಲ್ಲವೆ?
ಆಗಬೇಕಿತ್ತು. ಆದರೆ ಕೆಚ್ಚೆದೆಯ ವೀರ ಧೀರ ಕನ್ನಡಿಗನ ತಿರಸ್ಕಾರದ ವತಿಯಿಂದ ಅಲ್ಪವೃಕ್ಷ ಆಗಿದೆ.

ಹೆಚ್. ಆರ್. ಕೊಳಗಿ, ಸಾಗರ
ಲೋಕ ಕಲ್ಯಾಣಕ್ಕಾಗಿ ಹೋಮ ಹವನ ಎಂದಾದರೆ ನಮ್ಮ ದೇಶ ಇನ್ನೂ ಏಕೆ ಬಡತನದಿಂದ ನರಳುತ್ತಿದೆ?
ಅಗ್ನಿಯಲ್ಲಿ ಮಾಡುವ ಬದಲು ನೀರಿನಲ್ಲಿ ಮಾಡುವುದರಿಂದ.

ವಿ. ಹಮೀದ್, ವಿಟ್ಲ
ಮೋಹಿನಿ ಬಿಳಿಯ ವಸ್ತ್ರವನ್ನೇ ಧರಿಸಲು ಕಾರಣವೇನು?
'ಛಿ! ಅವಳೊಂದು ಬಣ್ಣದ ಚಿಟ್ಟೆ' ಎಂದು ಜನ ತಿರಸ್ಕರಿಸದಿರಲಿ ಎಂದು.

ಹೇಮಾವತಿ ಜೈನ್, ಹೂವಿನಹಡಗಲಿ
ನಿಮ್ಮ ಉತ್ತರ ಸರ್ವ ದೃಷ್ಟಿಯಿಂದಲೂ ಶ್ರೇಷ್ಠ ಎನಿಸಿದರೂ, ನೀವು ರಾಮಣ್ಣ ಅನಿಸಿಕೊಂಡಿಲ್ಲ. ಏಕೆ ರಾಮ್?
ಇನ್ನೂ 'ಅಣ್ಣ'ನೋ, 'ಅಕ್ಕ'ನೋ ನಿರ್ಧರಿಸಲಾಗಿಲ್ಲವಲ್ಲ! ಅಲ್ಲದೆ, ಉತ್ತರದಲ್ಲಿರುವ ಶ್ರೇಷ್ಠತೆ ವ್ಯಕ್ತಿತ್ವದಲ್ಲಿ ಇರಬೇಕಲ್ಲ!

ಎಂ.ಎ. ಕುಮಾರ್, ಬೆಂಗಳೂರು
ಹೆಣ್ಣಿನ ಮನಸ್ಸು ಮೃದು ಎಂದು ನಂಬುವುದು ಹೇಗೆ?
ನಿಮ್ಮ ಅಮ್ಮನ ಮುಂದೆ ಸೂಜಿಯಿಂದ ಚುಚ್ಚಿಕೊಂಡು ಪ್ರತಿಕ್ರಿಯೆ ನೋಡಿ.

ಕುಮಾರ ಚಲವಾದಿ, ಹಾಸನ
ಗಂಡಿನ ಯಶಸ್ಸಿನ ಹಿಂದೆ ಸ್ತ್ರೀ ಇರುತ್ತಾಳೆ ಸರಿ; ಆದರೆ ಸ್ತ್ರೀ ಯಶ ಸಾಧಿಸಿದಾಗ ಕ್ರೆಡಿಟ್ ಯಾರಿಗೆ?
ಕ್ರೆಡಿಟ್ ಯಾವಾಗಲೂ ಗಂಡಿಗೇ. ಕ್ಯಾಶ್ ಮಾತ್ರ ಸ್ತ್ರೀಗೆ.

ಬೋರೇಗೌಡ, ಸರಸ್ವತಿಪುರ
ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಲ್ಲ ಅಂತಾನೆ. ಬೇರೆಲ್ಲಿಗೆ ಹೋಗಲಿ ಗುರುದೇವಾ?
'ಸೀರಿಯಲ್ ಅತ್ತೆ' ಆಗಿಬಿಡಿ. 'ಆ ಪಾತ್ರಧಾರಿಯ ಮುಂದೆ ನಾನು ಬಚ್ಚಾ' ಎನ್ನುತ್ತಾ ಶನಿ ಮಾಯವಾಗುತ್ತಾನೆ.

## ಬಹುಮಾನಿತ ಪ್ರಶ್ನೆ

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಹೆಂಗಸರು ಬುದ್ಧಿವಂತರೆಂದು ತೋರಿಸಿಕೊಳ್ಳುವುದಕ್ಕಿಂತ ಸುಂದರಿಯರಾಗಿ ಕಾಣಿಸಿಕೊಳ್ಳಲು ಬಯಸುವುದೇಕೆ?
ದಡ್ಡ ಗಂಡಿಗೆ ಬುದ್ಧಿಗಿಂತ ರೂಪವೇ ಸುಲಭವಾಗಿ ತಿಳಿಯುವುದರಿಂದ.

ಕೃಷ್ಣಮೂರ್ತಿ ಎಸ್, ಬೆಂಗಳೂರು
ದೇವ ಮತ್ತು ದೇವಿ, ಇವರಿಬ್ಬರಲ್ಲಿ ಯಾರನ್ನು ಆರಾಧಿಸಿದರೆ ಬೇಗ ಒಲಿಯುತ್ತಾರೆ?
ದೇವನೇ; ದೇವಿ ಮ್ಯಾಚಿಂಗ್ ಡ್ರೆಸ್ ಧರಿಸಿ, ಮೇಕಪ್ ಮಾಡಿಕೊಂಡು ಬರುವುದು ತಡವಾಗುತ್ತದೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ನಾಯಿಬುದ್ಧಿಗೂ, ನರಿಬುದ್ಧಿಗೂ ವ್ಯತ್ಯಾಸವೇನು?
ಸೆಷನ್‌ನಲ್ಲಿ (ಕಚ್ಚುವ ಬೊಗಳುವ) ನಾಯಿಬುದ್ಧಿ; ರೆಸಾರ್ಟ್‌ಗಳಲ್ಲಿ ನರಿಬುದ್ಧಿ.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
ಬ್ರ್ಯಾಂಡಿ ಮತ್ತು ವಿಸ್ಕಿಗಳಿಗೆ ಎಣ್ಣೆ ಎಂದು ಏಕೆ ಕರೆಯುತ್ತಾರೆ?



ಒಮ್ಮೆ ಅಂಟಿಕೊಂಡರೆ ಹೋಗಲಾಡಿಸುವುದು ಕಷ್ಟವಾದ್ದರಿಂದ.

ಮೋಹನ ರು. ಹಣಗಿ, ಅಮೀನಗಡ
ಮುಪ್ಪಿನವರ ಬಾಯಲ್ಲಿ ಬೈಗಳು ಹೆಚ್ಚು. ಯಾಕಿರಬಹುದು ಮೇಷ್ಟ್ರೆ?
ಆ ವಯಸ್ಸಿನಲ್ಲಿ ಸಲೀಸಾಗಿ ಆಡುವುದು ನಾಲಿಗೆ ಮಾತ್ರ ಆದ್ದರಿಂದ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಹುಂಡಿಗೆ ಹಣ ಹಾಕುವರಲ್ಲ, ದೇವರೂ ಸಹ ಭಕ್ತರಿಂದ ಹಣಕ್ಕೆ ಆಸೆ ಪಡುತ್ತಾನಾ?
ಊಹೂಂ. ಅದು ನಾವೇ ಸ್ವಯಿಚ್ಛೆಯಿಂದ ನೀಡುವ ಜಿಎಸ್‌ಟಿ (ಗಾಡ್ಸ್ ಸರ್ವೀಸ್ ಟ್ಯಾಕ್ಸ್).

■ ರಾಮ್